ಕಛೇರಿ : +91 80 2287 4039
+91 80 2235 4085
ಫ್ಯಾಕ್ಸ್ : +9180 2228 5591
ಇ-ಮೇಲ್ : com-hfws@karnataka.gov.in

# ಆಯುಕ್ತಾಲಯ

## ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

ಸಂ:ಉನಿ/ರಾಕಘ/ನೋವೆಲ್ ಕರೋನಾ ವೈರಸ್/17/2020-21(ಭಾಗ) ದಿನಾಂಕ:14.08.2020

## ಸುತ್ತೋಲೆ

**ವಿಷಯ:** ರಾಜ್ಯಕ್ಕೆ ಆಗಮಿಸುತ್ತಿರುವ ಅಂತರ-ರಾಜ್ಯ ವಲಸೆ ಕಾರ್ಮಿಕರಿಗೆ ಸಾಮಾನ್ಯ ಪ್ರಮಾಣೀಕೃತ ಕಾರ್ಯನಿರ್ವಹಣಾ ಪ್ರಕ್ರಿಯೆ.

**ಉಲ್ಲೇಖ 1:** No: BMRCL/MD/PS/2020-21, dated: 02.07.2020
2: ತಾಂತ್ರಿಕ ಸಮಿತಿಗೆ ಬರೆದಿರುವ ಪತ್ರ ದಿನಾಂಕ: 13.08.2020
3: ತಾಂತ್ರಿಕ ಸಲಹಾ ಸಮಿತಿ ಸಿದ್ಧ ಪಡಿಸಿರುವ ಪ್ರಮಾಣೀಕೃತ ಕಾರ್ಯನಿರ್ವಹಣಾ ಪ್ರಕ್ರಿಯೆ ದಿನಾಂಕ: 14.08.2020

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಲಾಕ್ ಡೌನ್ ಅವಧಿಯಲ್ಲಿ ವಲಸೆ ಕಾರ್ಮಿಕರ ಕೊರತೆಯಿಂದಾಗಿ ರಾಜ್ಯದಲ್ಲಿ ಹಲವಾರು ನಿರ್ಮಾಣ ಯೋಜನೆಗಳು ಸ್ಥಗಿತಗೊಂಡಿದ್ದವು. ಲಾಕ್ ಡೌನ್ ತೆರವಾದ ನಂತರ ರಾಜ್ಯದ ಗಡಿಗಳು ಮುಕ್ತವಾಗಿರುವುದರಿಂದ ಕಾರ್ಮಿಕರು ರಾಜ್ಯಕ್ಕೆ ಆಗಮಿಸಲು ಪ್ರಾರಂಭಿಸಿದ್ದಾರೆ. ಆದ್ದರಿಂದ, ರಾಜ್ಯಕ್ಕೆ ಆಗಮಿಸುತ್ತಿರುವ ಅಂತರ-ರಾಜ್ಯ ವಲಸೆ ಕಾರ್ಮಿಕರಿಗೆ ಒಂದು ಸಾಮಾನ್ಯ ಪ್ರಮಾಣೀಕೃತ ಕಾರ್ಯನಿರ್ವಹಣಾ ಪ್ರಕ್ರಿಯೆಯನ್ನು ಜಾರಿಗೆ ತರುವ ಅಗತ್ಯವಿದೆ. ಈ ಕುರಿತು ತಾಂತ್ರಿಕ ವಿಶ್ಲೇಷಣಾ ಸಮಿತಿಯ ಸಲಹೆಯನ್ನು ಪಡೆದು ಸದರಿ ಸಮಿತಿಯ ಅಭಿಪ್ರಾಯದಂತೆ ಈ ಕೆಳಕಂಡ ಮಾರ್ಗಸೂಚಿಗಳನ್ನು ನೀಡಲಾಗಿದೆ.

ರಾಜ್ಯಕ್ಕೆ ಆಗಮಿಸುವ ಎಲ್ಲಾ ವಲಸೆ ಕಾರ್ಮಿಕರೂ ಕೂಡಲೇ ಇತರಿಂದ ದೂರವಾಗಿ ಪ್ರತ್ಯೇಕವಾಗಿರುವುದು. ಅವರನ್ನು ಜ್ವರ,ಶೀತ, ಕೆಮ್ಮು, ಗಂಟಲು ನೋವು, ರುಚಿ ಇಲ್ಲದಿರುವಿಕೆ, ವಾಸನೆ ತಿಳಿಯದಿರುವಿಕೆ, ಶರೀರದಲ್ಲಿ ನೋವು, ಭೇದಿ, ಉಸಿರಾಟದಲ್ಲಿ ತೊಂದರೆ ಇತ್ಯಾದಿ ಕೋವಿಡ್-19ರ ಲಕ್ಷಣಗಳಿಗಾಗಿ (ಸರ್ಕಾರಿ ಅಥವಾ ಖಾಸಗಿ) ವೈದ್ಯಕೀಯ ತಂಡಗಳಿಂದ ಪ್ರಾಥಮಿಕ ಪರೀಕ್ಷೆಗೊಳಪಡಿಸಲಾಗುವುದು.

1. **ಇತರ ರಾಜ್ಯಗಳಿಂದ ಆಗಮಿಸಿದ ವಲಸೆ ಕಾರ್ಮಿಕರಿಗೆ ಆರೋಗ್ಯ ತಂಡದಿಂದ ಪ್ರಾಥಮಿಕ ಪರೀಕ್ಷೆಗಳು:**

1.1. **ಲಕ್ಷಣವಿರುವವರೆಲ್ಲ (ಕೋವಿಡ್-19ರಂಥಹ ಲಕ್ಷಣ ಹೊಂದಿರುವವರು)** ರನ್ನು ಮೊದಲಿಗೆ ರಾಪಿಡ್ ಆಂಟಿಜನ್ ಪರೀಕ್ಷೆ (RAT) ಗೆ ಒಳಪಡಿಸಲಾಗುವುದು. ನೇಸೋಫ್ಯಾರಿಂಜೆಯಲ್ ಸ್ವಾಬನ್ನು ಆರ್ ಎ ಟಿ (RAT) ಪರೀಕ್ಷೆಗಾಗಿ ಹಾಗೂ ಒಂದು ನೇಸೋಫ್ಯಾರಿಂಜೆಯಲ್ +ಒಂದು ಗಂಟಲ ಸ್ವಾಬನ್ನು ಆರ್ ಟಿ-ಪಿಸಿಆರ್ (RT-PCR) ಪರೀಕ್ಷೆಗಾಗಿ ಸಂಗ್ರಹಿಸಲಾಗುವುದು. ಆರ್ ಎ ಟಿ (RAT) ಪರೀಕ್ಷೆಯಲ್ಲಿ ರೋಗ ದೃಢ ಪಡದಿದ್ದರೆ, ಇತರ ಮಾದರಿಗಳನ್ನು ಆರ್ ಟಿ-ಪಿಸಿಆರ್ (RT-PCR)



3ನೇ ಮಹಡಿ, ಐಪಿಪಿ ಕಟ್ಟಡ, ಆನಂದ್ ರಾವ್ ವೃತ್ತ, ಬೆಂಗಳೂರು - 560 009.

ಪರೀಕ್ಷೆಗೊಳಪಡಿಸಲಾಗುವುದು. ಆರ್ ಟಿ-ಪಿಸಿಆರ್ (RT-PCR) ಪರೀಕ್ಷೆಗಳಲ್ಲೂ ರೋಗ ದೃಢಪಡದಿದ್ದರೆ, ಆಗ ಅವರು ಕೆಲಸಕ್ಕೆ ಹಾಜರಾಗಬಹುದು. ಆದಾಗ್ಯೂ, ಮುಂದಿನ 14 ದಿನಗಳಲ್ಲಿ ಕೋವಿಡ್-19ರ ಯಾವುದೇ ಲಕ್ಷಣಗಳು ಕಂಡು ಬಂದರೆ ತಾವಾಗಿಯೇ ವರದಿ ಮಾಡಿಕೊಳ್ಳುವುದು.

ಪರೀಕ್ಷೆಗಳಲ್ಲಿ ಯಾರಿಗಾದರೂ ರೋಗ ದೃಢಪಟ್ಟರೆ ಅವರಿಗೆ ಜಾರಿಯಲ್ಲಿರುವ ಶಿಷ್ಟಾಚಾರಗಳಂತೆ ಕೋವಿಡ್-19ರ ಚಿಕಿತ್ಸೆ ನೀಡಲಾಗುವುದು.

1.2. **ಯಾವುದೇ ಲಕ್ಷಣಗಳಿಲ್ಲದಿರುವವರನ್ನು (ಕೋವಿಡ್-19 ನಂತಹ ಲಕ್ಷಣವಿಲ್ಲದಿರುವವರು)** ರಾಪಿಡ್ ಆಂಟಿಜನ್ ಪರೀಕ್ಷೆ (ನೇಸೋಫ್ಯಾರಿಂಜೆಯಲ್ ಸ್ವಾಬ್) (RAT) ಗೆ ಒಳಪಡಿಸಲಾಗುವುದು ಮತ್ತು ಯಾರಿಗೆ ಪರೀಕ್ಷೆಯಲ್ಲಿ ರೋಗ ದೃಢಪಟ್ಟಿಲ್ಲವೋ ಅವರು ಕೆಲಸಕ್ಕೆ ಹಾಜರಾಗಬಹುದು. ಆದಾಗ್ಯೂ, ಮುಂದಿನ 14 ದಿನಗಳಲ್ಲಿ ಕೋವಿಡ್-19ರ ಯಾವುದೇ ಲಕ್ಷಣಗಳು ಕಂಡು ಬಂದರೆ ತಾವಾಗಿಯೇ ವರದಿ ಮಾಡಿಕೊಳ್ಳುವುದು.

ಪರೀಕ್ಷೆಗಳಲ್ಲಿ ಯಾರಿಗಾದರೂ ರೋಗ ದೃಢಪಟ್ಟರೆ ಅವರಿಗೆ ಜಾರಿಯಲ್ಲಿರುವ ಶಿಷ್ಟಾಚಾರಗಳಂತೆ ಕೋವಿಡ್-19ರ ಚಿಕಿತ್ಸೆ ನೀಡಲಾಗುವುದು.

**2. ಕೆಲಸದ ಸ್ಥಳದಲ್ಲಿ:**

2.1. ಕಡ್ಡಾಯವಾಗಿ ಮುಖದ ಮಾಸ್ಕುಗಳನ್ನು ಧರಿಸಿ, 2 ಮೀಟರ್ ಶಾರೀರಿಕ ಅಂತರವನ್ನು ಪಾಲಿಸುತ್ತಾ ಪ್ರವೇಶ ಘಟ್ಟದಲ್ಲಿ ಪ್ರತಿದಿನ ಥರ್ಮಲ್ ಸ್ಕ್ಯಾನಿಂಗ್ ಮತ್ತು ಕೋವಿಡ್ ಲಕ್ಷಣಗಳಿಗಾಗಿ ಪ್ರಾಥಮಿಕ ಪರೀಕ್ಷೆಗಳನ್ನು ನಡೆಸತಕ್ಕದ್ದು; ವಿವಿಧ ಸ್ಥಳಗಳಲ್ಲಿ ಸೋಪು ಹಾಗೂ ಸ್ಯಾನಿಟೈಸರ್ ಗಳ ಬಳಕೆಗೆ ಏರ್ಪಾಡು ಮಾಡುವುದು.

2.2. ಯಾರಿಗಾದರೂ ಕೋವಿಡ್-19ರ ಲಕ್ಷಣಗಳು ಕಂಡುಬಂದರೆ ಅವರನ್ನು ಕೆಲಸದ ಸ್ಥಳದಲ್ಲಿ ಪ್ರತ್ಯೇಕವಾಗಿರಿಸುವುದು ಹಾಗೂ ಹತ್ತಿರದ (ಸರ್ಕಾರಿ ಅಥವಾ ಖಾಸಗಿ) ಜ್ವರ ಚಿಕಿತ್ಸಾ ಕೇಂದ್ರಕ್ಕೆ ಕೋವಿಡ್ ಪರೀಕ್ಷೆಗಳ ಟ್ರಯೇಜಿಗಾಗಿ ಸೂಚಿಸುವುದು.

ಮೂಲಸೌಕರ್ಯ ಕಾರ್ಯಗಳಲ್ಲಿ ತೊಡಗಿರುವ ಎಲ್ಲಾ ಕಂಪನಿಗಳು ಈ ಮಾರ್ಗಸೂಚಿಗಳನ್ನು ಅನುಸರಿಸಬೇಕು

14.0.20

**ಆಯುಕ್ತರು**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು**

**ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ:**

1. ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು.
2. ಎಲ್ಲಾ ಜಿಲ್ಲೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.

3. ಎಲ್ಲಾ ಜಿಲ್ಲೆಯ ಜಿಲ್ಲಾ ಶಸ್ತ್ರಚಿಕಿತ್ಸಕರು.
4. ಎಲ್ಲಾ ಜಿಲ್ಲೆಯ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು

**ಪ್ರತಿಯನ್ನು ಮಾಹಿತಿಗಾಗಿ:**

1. ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯ ಕಾರ್ಯದರ್ಶಿಗಳು, ಬೆಂಗಳೂರು.
2. ಅಪರ ಮುಖ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು.
3. ಅಪರ ಮುಖ್ಯ ಕಾರ್ಯದರ್ಶಿಗಳು, ಮೂಲಸೌಕರ್ಯ ಅಭಿವೃದ್ಧಿ ಇಲಾಖೆ.
4. ವ್ಯವಸ್ಥಾಪಕ ಕಾರ್ಯದರ್ಶಿ,ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ, ಬೆಂಗಳೂರು.
5. ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ.
6. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು.